## ಗುತ್ತಿಗೆ ಉಪನ್ಯಾಸಕರನ್ನು ಖಾಯಂಗೊಳಿಸುವುದು

೯೧೫ (೨೦೧೨) ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ್.)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯಾದ್ಯಂತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಉಪನ್ಯಾಸಕರ ಸಂಖ್ಯೆ ಎಷ್ಟು ? ಅವರಿಗೆ ನೀಡುತ್ತಿರುವ ವೇತನ ಎಷ್ಟು ? ವಾರದಲ್ಲಿ ಅವರ ಸರಾಸರಿ ಕೆಲಸದ ದಿನಗಳೆಷ್ಟು ?

ಆ) ಅವರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರದ ಉದ್ದೇಶವಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಈ ಇಲಾಖೆಯಲ್ಲಿ ಒಟ್ಟು ೫೧೭ ಜನ ಗುತ್ತಿಗೆ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಇವರ ಮಾಸಿಕ ಕ್ರೋಢೀಕೃತ ವೇತನ ರೂ. ೧೮೯೦–೦೦. ಪ್ರಯೋಗವಿರುವ ಭೋಧನ ವಿಷಯಗಳಲ್ಲಿ ವಾರಕ್ಕೆ ೨೦ ಗಂಟೆಗಳ ಕಾರ್ಯಭಾರ ಹಾಗೂ ಪ್ರಯೋಗವಿಲ್ಲದಿರುವ ಭೋಧನ ವಿಷಯಗಳಲ್ಲಿ ವಾರಕ್ಕೆ ೧೬ ಗಂಟೆಗಳ ಕಾರ್ಯಭಾರವಿರುತ್ತದೆ.

ಆ) ಗುತ್ತಿಗೆ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರ ಯಾವುದೇ ನಿರ್ಧಾರವನ್ನು ಇದುವರೆಗೆ ತೆಗೆದುಕೊಂಡಿರುವುದಿಲ್ಲ.

ಶ್ರೀ ಬಿ. ಎ. ಉಪ್ಪಿನ್.—ಅಧ್ಯಕ್ಷರೇ, ಅತಿಕಾಲಿಕ ಉಪನ್ಯಾಸಕರುಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೆ, ಇಲ್ಲಿ ಗುತ್ತಿಗೆ ಆಧಾರದ ಮೇಲಿರತಕ್ಕ ಉಪನ್ಯಾಸಕರ ಸಂಖ್ಯೆ ಎಷ್ಟು ಎಂದು ತಪ್ಪಾಗಿ ಪ್ರಿಂಟ್ ಆಗಿದೆ. ಇವ್ರೊತ್ತು ಪಾರ್ಟ್‌ಟೈಮ್ ಲೆಕ್ಚ್ಚರರ್ಸ್ ಎನಿದ್ದಾರೆ, ಅವರಿಗೆ ಕೊಡುವ ವೇತನ ಎಷ್ಟು ವಿವರಗಳು ಇದ್ದರೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ಮೊದಲು ಗುತ್ತಿಗೆ ಉಪನ್ಯಾಸಕರ ಸಂಖ್ಯೆ ಎಷ್ಟು ಎಂದು ಕೇಳಿದ್ದರು. ಈಗ ಪಾರ್ಟ್ ಟೈಮ್ ಲೆಕ್ಚ್ಚರರ್ಸ್ ಬಗ್ಗೆ ಕೇಳುತ್ತಿದ್ದಾರೆ. ಆ ಬಗ್ಗೆ ನನ್ನಲ್ಲಿ ವಿವರ ಇಲ್ಲ. ಅವರು ಇನ್ನೊಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಇನ್ನು ಅವರ ಎರಡನೆಯ ಪ್ರಶ್ನೆಯಲ್ಲಿ ಗುತ್ತಿಗೆ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಉದ್ದೇಶವಿದೆಯೇ ಎಂದು ಕೇಳಿದ್ದಾರೆ. ಕಾಂಟ್ರಾಕ್ಟ್ ಲೆಕ್ಚ್ಚರರ್ಸ್ ಬಗ್ಗೆ ಸರ್ಕಾರ ಯಾವುದೇ ನಿರ್ಧಾರವನ್ನು ಇದುವರೆಗೆ ತೆಗೆದುಕೊಂಡಿರುವುದಿಲ್ಲ. ಪಾರ್ಟ್‌ಟೈಮ್ ಲೆಕ್ಚ್ಚರರ್‌ಗಳನ್ನು ಅಲ್ಲಿ ಸ್ಥಳೀಯ ಪ್ರಸಂಗಗಳಿಗೆ ಹೊಂದಿಕೊಂಡಂತೆ ಅಲ್ಲಿ ಬೇಕು, ಎನ್ನುವ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅಪಾಯಿಂಟ್ ಮೆಂಟ್ ಮಾಡುತ್ತಿದ್ದಾರೆ. ಆದ್ದರಿಂದ, ಅವರನ್ನು ಖಾಯಂ ಮಾಡಕಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎ. ಉಪ್ಪಿನ್.—ಸ್ವಾಮಿ, ಪಾರ್ಟ್‌ಟೈಮ್ ಲೆಕ್ಚ್ಚರರ್ಸ್ ಸುಮಾರು ೨೦೦೦ ಜನರಿದ್ದಾರೆ ಎಂದು ನನಗೆ ಕಂಡು ಬಂದಿದೆ. ಇವರಿಗೆ ತಿಂಗಳಿಗೆ ೪೦೦ ರೂಪಾಯಿ ಸಂಬಳವನ್ನು ಕೊಡುತ್ತಿದ್ದೀರಿ. ಪೋಸ್ಟ್ ಗ್ರಾಜುಯೇಟ್ಸ್ ಸೆಕೆಂಡ್ ಕ್ಲಾಸ್‌ನಲ್ಲಿ ಪಾಸ್ ಆದವರು ಈ ೪೦೦ ರೂಪಾಯಿಗಳಲ್ಲಿ ಹೇಗೆ ತಮ್ಮ ಜೀವನವನ್ನು ಮಾಡಬೇಕು ? ಇವರು ಸುಮಾರು ೮–೧೦ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುತ್ತಿರುವ ಉಪನ್ಯಾಸಕರಿಗೆ ತಾವು ಏನು ಸಂಬಳ ಕೊಡುತ್ತಿದ್ದೀರಿ ಅದೇ ಸಂಬಳವನ್ನು ಇವರಿಗೂ ಕೊಡುತ್ತೀರಾ ? ಇವರನ್ನು ಖಾಯಂ ಮಾಡುತ್ತೀರಾ ? ನನ್ನ ತಾಲ್ಲೂಕಿನ ಗುಡಿಗೇರದಲ್ಲಿ ಕಳೆದ ೨ ವರ್ಷಗಳಿಂದ ಕೆಮಿಸ್ಟ್ರಿ ಲೆಕ್ಚರರ್ಸೇ ಇಲ್ಲ. ನಾನು ಕೇಳಿದರೆ ಅಪಾಯಿಂಟ್‌ಮೆಂಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ ತಾವ್ರ ಕೊಡತಕ್ಕ ೪೦೦ ರೂಪಾಯಿಗಳಿಗೆ ಯಾರೂ ಬರುವುದಿಲ್ಲ. ಕಾಂಟ್ರಾಕ್ಟ್ ಬೇಸಿಸ್‌ನಲ್ಲಿರುವವರಿಗೆ ತಿಂಗಳಿಗೆ ೧೪೦೦ ರೂಪಾಯಿ ಕೊಡುತ್ತಿದ್ದೀರಿ. ಅವರನ್ನು ರೆಗ್ಯುಲರೈಸ್ ಮಾಡಿದರೆ ೨೧೦೦ ರೂಪಾಯಿ ಬರುತ್ತದೆ. ಆದರೆ ಈ ಪಾರ್ಟ್‌ಟೈಂ ಲೆಕ್ಚರರ್ಸ್ ೪೦೦ ರೂಪಾಯಿಗಳಿಗೆ ಕಳೆದ ೮–೧೦ ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಈಗ ಏನಾಗಿದೆ ಎಂದರೆ ಸರ್ಕಾರದವರು ನಮ್ಮನ್ನು ಖಾಯಂ ಮಾಡುತ್ತಾರೋ, ಇಲ್ಲವೋ ಎಂದು ತಿಳಿದುಕೊಂಡು ಇವರುಗಳು ಸರಿಯಾಗಿ ಪಾಠಗಳನ್ನೂ ಮಾಡುತ್ತಿಲ್ಲ. ಆದ್ದರಿಂದ ದಯವಿಟ್ಟು ಇವರನ್ನು ರೆಗ್ಯುಲರೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಜೀವರಾಜ ಆಳ್ವ.—ಕಾಂಟ್ರಾಕ್ಟ್ ಲೆಕ್ಚರರ್ಸ್‌ನ್ನು ತೆಗೆದುಕೊಳ್ಳುವಾಗಲೂ ಕೂಡ ರೋಸ್ಟರ್ ಸಿಸ್ಟಂನ್ನು ಮೇನ್‌ಟೇನ್ ಮಾಡಿ, ಮೆರಿಟ್ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ. ಆದರೂ ಕೂಡ ಇವರನ್ನೇ ನಾವು ಖಾಯಂ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಖಾಯಂ ಮಾಡುವುದಕ್ಕೆ ತೊಂದರೆಯಾಗಿದೆ. ಪರಿಸ್ಥಿತಿ ಹೀಗಿರುವಾಗ ಈ ಪಾರ್ಟ್‌ಟೈಂ ಲೆಕ್ಚರರ್ಸ್‌ನ್ನು ನಾವು ಖಾಯಂ ಮಾಡವುದಕ್ಕೆ ಬರುವುದಿಲ್ಲ. ಇವರು ಸೆಲೆಕ್ಷನ್ ಕಮಿಟಿಯು ಮುಖಾಂತರವೇ ಆಯ್ಕೆ ಆಗಿ ಬರಬೇಕು.

ಶ್ರೀ ಬಿ. ಎ. ಉಟ್ಟಿನ್.—ನನ್ನ ತಾಲ್ಲೂಕಿನಲ್ಲಿ ಲೋಕಲ್‌ನಲ್ಲಿ ಬಹಳ ಜನ ವಿದ್ಯಾವಂತರಿದ್ದಾರೆ. ಅವರು ಯಾರೂ ಕೂಡ ಈ ೪೦೦ ರೂಪಾಯಿಗೆ ಕೆಲಸ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಆದ್ದರಿಂದ ಇವರಿಗೆ ಕೊಡತಕ್ಕ ವೇತನವನ್ನಾದರೂ ಹೆಚ್ಚಿಗೆ ಮಾಡಿದರೆ ಲೋಕಲ್‌ನವರೇ ಯಾರಾದರೂ ಮುಂದೆ ಬರುತ್ತಾರೆ. ಆದ್ದರಿಂದ ಇವರ ವೇತನವನ್ನು ಹೆಚ್ಚು ಮಾಡತಕ್ಕ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಗತ ಮಾಡುತ್ತೀರಾ ?

ಡಾ॥ ಜೀವರಾಜ ಆಳ್ವ.—ಪಾರ್ಟ್‌ಟೈಂ ಲೆಕ್ಚರರ್ಸ್‌ಗೆ ಕೊಡತಕ್ಕ ವೇತನವನ್ನು ಹೆಚ್ಚಿಗೆ ಮಾಡಬೇಕೆಂದು ತಾವು ಏನು ಹೇಳಿದ್ದೀರಿ, ಇದನ್ನು ಸರ್ಕಾರ ಪರಿಶೀಲಿಸುತ್ತದೆ.

ಅಧ್ಯಕ್ಷರು.—ಚುಕ್ಕೆ ಪ್ರಶ್ನೆ ೧೫೬೧ ನಿಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶ ವನ್ನು ಕೇಳಿದ್ದಾರೆ. ಉತ್ತರವನ್ನು ತರಿಸಿಕೊಡುತ್ತೇನೆ.

## ಕನಕಗಿರಿ ಕ್ಷೇತ್ರದ ಕೆರೆಗಳ ನಿರ್ಮಾಣದ ಬಗ್ಗೆ.

೯೧೭ (೨೩೮೦) ಶ್ರೀ ರಂಗದೇವರಾಯಲು (ಕನಕಗಿರಿ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕನಕಗಿರಿ ಕ್ಷೇತ್ರದಲ್ಲಿ ಸುಮಾರು ೩–೪ ವರ್ಷಗಳಿಂದ ಕೆರೆಗಳ ನಿರ್ಮಾಣಕ್ಕಾಗಿರುವ ವೆಚ್ಚವೆಷ್ಟು, ಮತ್ತು ಕೈಗೊಂಡಿರುವ ಕೆರೆಗಳೆಷ್ಟು ಹಾಗೂ ಎಷ್ಟು ಕೆರೆಗಳ ಕಾರ್ಯ ಪೂರ್ಣವಾಗಿದೆ ?

ಆ) ಇದರಿಂದ ಎಷ್ಟು ಎಕರೆ ನೀರಾವರಿಯಾಗುವುದು ?

ಇ) ಸಿಂಧನೂರು ತಾಲ್ಲೂಕಿನ ಭೋಗಾಪುರ ಕೆರೆ ೩ವರ್ಷಗಳ ಹಿಂದೆಯೇ ಮಂಜೂರಾಗಿದ್ದು ಆ ಬಗ್ಗೆ ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿರುವುದರಿಂದ ಕಾರ್ಯ ಪೂರ್ತಿಯಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ಮತ್ತು ಯಾವಾಗ ಈ ಕೆರೆಯ ಕಾರ್ಯವನ್ನು ಪೂರ್ತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಕಳೆದ ನಾಲ್ಕು ವರ್ಷಗಳಲ್ಲಿ ಕೆರೆಗಳ ನಿರ್ಮಾಣಕ್ಕಾಗಿರುವ ವೆಚ್ಚ ೩೯.೨೩ ಲಕ್ಷ ರೂ. ಗಳು
ಕೈಗೊಂಡಿರುವ ಹೊಸ ಕೆರೆಗಳು : ಎರಡು

ಪೂರ್ಣವಾಗಿರುವ ಕೆರೆಗಳು : ಒಂದು

ಆ) ಈ ಕೆರೆಗಳಿಂದ ೧೯೩೫ ಹೆಕ್ಟೇರುಗಳು.

ಇ) ಭೋಗಾಪುರ ಕೆರೆ ಮಂಜೂರಾಗಿಲ್ಲ.

ಈ) ಈ ಕೆರೆ ತಾಂತ್ರಿಕವಾಗಿ ಶಕ್ಯವಾಗಿಲ್ಲವಾದ್ದರಿಂದ ಕೈ ಬಿಟ್ಟಿದೆ.
(ಮಾನ್ಯ ಸದಸ್ಯರಿಂದ ಉಪಪ್ರಶ್ನೆ ಇಲ್ಲ)